**FDP 6-13** **CW.2**

**ಸಾಕ್ಷಿಯನ್ನು ದಿನಾಂಕಃ 13.02.2020 ರಂದು ಪುನಃ ಕರೆಯಿಸಿ ಪ್ರಮಾಣ ಮಾಡಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಶ್ರೀ ಎಂ ಎಸ್ ಬಿ ವಕೀಲರಿಂದ ಎದುರುದಾರರ ಪರವಾಗಿಃ-**

..13.. ದಿಃ 23.1.2020 ರಂದು ತನ್ನ ಪಾಟಿ ಸವಾಲಿನಲ್ಲಿ ಅಳತೆಯ ವಿಷಯದಲ್ಲಿ ಗೊಂದಲವಿದ್ದಾಗ, ಆ ಕಾಲಕ್ಕೆ ಸರ್ವೆ ಕಾರ್ಯ ಪೂರೈಸಲು ಬರುವುದಿಲ್ಲವೆಂದು, ಸರ್ವೆ ಮ್ಯಾನುವೆಲ್ಲದಲ್ಲಿ ತಿಳಿಸಲಾಗಿದೆ, ಆದರೆ ನಾನು ಅದು ಸುಳ್ಳು ಅಂತಾ ಸಾಕ್ಷಿ ನುಡಿದಿದ್ದೆ, ಆದರೆ ಆ ರೀತಿ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿ. ಸಾಕ್ಷಿ ಸ್ವತಃ ಹೇಳುತ್ತಾರೆ, 2017 ರಲ್ಲಿ ಸಾಕ್ಷಿ ನುಡಿದಿದ್ದು, ಅದು ಏನು ಅಂತಾ ನನಗೆ ನೆನಪಿರಲ್ಲಿ, ಆ ರೀತಿ ನಾನು ಸಾಕ್ಷಿ ನುಡಿದಿದ್ದೇನೆ. ಆ ದಿನ ಪಾಟಿ ಸವಾಲದಲ್ಲಿ ದಿಃ 31.10.2017 ರಂದು ನಾನು ಸಾಕ್ಷಿ ನುಡಿದಿರುವ ಬಗ್ಗೆ ದಾಖಲೆ ಸಮೇತ ಉಲ್ಲೇಖಿಸಿ ನನಗೆ ಪ್ರಶ್ನೆ ಕೇಳಲಾಗಿತ್ತು ಎಂದರೆ ಸರಿ. ಅಳತೆಯ ಬಗ್ಗೆ ಖಚಿತತೆ ಇಲ್ಲದೆ ಇರುವ ಕಾರಣ, ವಾರಂಟದಲ್ಲಿ ಆ ರೀತಿ ಅಳತೆ ನಮೂದು ಇಲ್ಲದೆ ಇರುವ ಕಾರಣ, ನ್ಯಾಯಾಲಯಕ್ಕೆ ನಾನು ಅರ್ಜಿ ಸಲ್ಲಿಸಿ, ಸ್ಪಷ್ಟೀಕರಣ ಪಡೆದುಕೊಂಡಿಲ್ಲವೆಂದರೆ ಸರಿ.

..14.. ಪ್ರಾಥಮಿಕ ಡಿಕ್ರಿಯಲ್ಲಾಗಲಿ, ವಾರಂಟದಲ್ಲಾಗಲಿ, ದಾವಾ ಆಸ್ತಿಗಳ ಅಳತೆ ನಮೂದು ಇಲ್ಲದೆ ಇರುವ ಕಾರಣ, ನಾನು ಅಳತೆ ಕೆಲಸ ಮಾಡುವ ಮೊದಲು, ಮಾನ್ಯ ನ್ಯಾಯಾಲಯದಿಂದ ಸ್ಪಷ್ಟೀಕರಣ ಪಡೆದುಕೊಳ್ಳಬೇಕಾಗಿತ್ತು ಎಂದರೆ ಸರಿ. ಆದಕಾರಣ ನಾನು ಈ ಪ್ರಕರಣದಲ್ಲಿ ನ್ಯಾಯಾಲಯದಿಂದ ಸ್ಪಷ್ಟವಾದ ಆದೇಶ ಪಡೆಯದೇ, ಕಮೀಶನ್ ವರ್ಕ ಮಾಡಿರುವುದು ಕಾಯ್ದೆ ಬದ್ದ ಅಲ್ಲವೆಂದರೆ ಸರಿಯಲ್ಲ. ಸರ್ವೆ ಮ್ಯಾನವೆಲ್ ದಲ್ಲಿ ತಿಳಿಸಿದಂತೆ, ನಿಯಮಗಳಿಗನುಗುಣವಾಗಿ ಸರ್ವೆ ಕಾರ್ಯ ಮಾಡಿ ವರದಿ ಸಲ್ಲಿಸಿದಲ್ಲಿ ಅದು ಕಾಯ್ದೆ ಬದ್ದ ಹಾಗೂ ಕ್ರಮಬದ್ದವಾಗಿರುತ್ತದೆ ಎಂದರೆ ಸರಿ. ಈ ಪ್ರಕರಣದಲ್ಲಿ ನಾನು ಸಲ್ಲಿಸಿದ ವರದಿ ನಮ್ಮ ಸರ್ವೆ ಮ್ಯಾನುವೆಲ್ ಪ್ರಕಾರ ಕ್ರಮಬದ್ಧವಾಗಿಲ್ಲವೆಂದರೆ ಸರಿ. ನನ್ನ ವರದಿಯಲ್ಲಿ ಯಾವ ಹಿಸ್ಸೆ ಯಾರಿಗೆ ಕೊಡಬೇಕು ಅಂತಾ ನಮೂದು ಮಾಡಿದ್ದೇವೆ ಸರಿ .

..15.. ಇಂತಹ ಹಿಸ್ಸೆ ಇಂತಹವರಿಗೆ ಕೊಡಬೇಕು ಅಂತಾ ನ್ಯಾಯಾಲಯದಿಂದ ನನಗೆ ನಿರ್ದೇಶನವಿರಲಿಲ್ಲವೆಂದರೆ ಸರಿ. ನಾನು ಹಾಜರಪಡಿಸಿರುವ ನಕ್ಷೆ ಹಾಗೂ ವರದಿ ನೋಡಿದರೆ ಜೋರಾಪೂರ ಕುಟುಂಬದ ಸದಸ್ಯರಿಗೆ ಈ ಆಸ್ತಿಗಳಲ್ಲಿ ಅಂದಾಜು 3 ರಿಂದ 4 ಚದರ ಅಡಿಯಷ್ಟು ಕ್ಷೇತ್ರ ಬರುತ್ತದೆ ಎಂದರೆ ಸರಿ. ಸದರಿ ದಾವಾ ಆಸ್ತಿಯನ್ನು ಮೇಲಿನ ಅಳತೆ ಪ್ರಕಾರ ಭಾಗಗಳನ್ನಾಗಿ ಮಾಡಲು ಬರುವುದಿಲ್ಲವೆಂದರೆ ಸರಿ.

**FDP 6-13** **CW.2**

ಮತ್ತು ಉಪಯೋಗ್ಯಕ್ಕೆ ಬರುವುದಿಲ್ಲವೆಂದರೆ ಸರಿ . ಅಂತಹ ಸಂದರ್ಬದಲ್ಲಿ ಉಪ-ನೋಂದಣಾಧಿಕಾರಿ ಕಚೇರಿಯಿಂದ ಆಸ್ತಿಯ ಸರಕಾರಿ ಮೌಲ್ಯ ಹಾಗೂ ಪಂಚ ಕಿಮ್ಮತ್ತನ್ನು ಪಡೆದುಕೊಂಡು ನಾಲ್ಯಯಾಲಯಕ್ಕೆ ವರದಿ ಸಲ್ಲಿಸಬೇಕಾಗುತ್ತದೆ ಎಂದರೆ ಸರಿ. ಈ ಪ್ರಕರಣದಲ್ಲಿ ಈ ರೀತಿಯ ವರದಿ ನಾನು ಸಲ್ಲಿಸಿಲ್ಲವೆಂದರೆ ಸರಿ.

..16.. ಈ ದಾವಾ ಆಸ್ತಿಗಳ ಅಖಂಡ ಕ್ಷೇತ್ರವನ್ನು ಪರಿಗಣಿಸಿ ಹಿಸ್ಸೆಗಳನ್ನು ಮಾಡುವ ಕುರಿತು ನನ್ನ ವರದಿಯಲ್ಲಿ ನಮೂದಿಸಿದ್ದೇನೆಂದರೆ ಸರಿ. ಅಖಂಡ ಕ್ಷೇತ್ರ ವೆಂದರೆ ಸಿ ಟಿ ಸರ್ವೆ ದಾಖಲೆಗಳಲ್ಲಿರುವ ಕ್ಷೇತ್ರ. ಉಪ-ವಿಭಾಗಗಳ ಕ್ಷೇತ್ರಗಳನ್ನು ಹೊರತುಪಡಿಸಿ ನಾನು ಅಳತೆ ಮಾಡಿಲ್ಲವೆಂದರೆ ಸರಿ. ನಾನು ನ್ಯಾಯಾಲಯಕ್ಕೆ ತಪ್ಪು ವರದಿಗಳನ್ನು ಸಲ್ಲಿಸಿ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇ ಎ ಒಪ್ಪಿಕೊಳ್ಳಲಾಯಿತು.

1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
**ಹುಬ್ಬಳ್ಳಿ.**